ಹುಡುಗನಾಗಿದ್ದಾಗ ಇಲ್ಲಿ ಈಜದ ದಿನವೇ ಇಲ್ಲ, ನನ್ನ ಎಲ್ಲಾ ತುಂಟಾಟಗಳ ಕ್ಷೇತ್ರ ಇದು' ಎನ್ನುತ್ತಿದ್ದರು. ಆ ಕಾಲದ ಅವರ ತುಂಟಾಟಗಳಿಗೆಲ್ಲಾ ಒಂದು ಕಟ್ಟು ಹಾಕಲು ಅವರನ್ನು ಬಾಗೂರಿನ ಗುಡಿಯ ಪೂಜಾರಿ ಸೋದರಮಾವನ ಬಳಿಗೆ ಹಾಕಿದ್ದನ್ನು ಭೈರಪ್ಪನವರು 'ಭಿತ್ತಿ' ಪುಸ್ತಕದ ಪೂರ್ವದಲ್ಲೇ ಹೇಳುತ್ತಾ, ಮಾವನ ಬಿಗಿ ಹೊಡೆತದಿಂದ ನಾನು ಇನ್ನಷ್ಟು ಚಿತ್ತ ವಿಚಲಿತನೂ, ಅನಾಥನೂ ಆದೆನೇ ಹೊರತು, ತಲೆಗೆ ಅಕ್ಷರವಂತೂ ಹತ್ತಲಿಲ್ಲ ಎಂದದ್ದುಂಟು. ಹಾಗೆ ತಾವು ಬೆಳೆದ ಸ್ವಂತ ಊರಿನಲ್ಲಿ ಹೊಸ ಕಟ್ಟಡವನ್ನು ಕಟ್ಟಿಸಿ ಅದರ ಉಸ್ತುವಾರಿಯನ್ನು ಕೃಷ್ಣಪ್ರಸಾದರಿಗೂ, ಅಲ್ಲೇ ಆಚೆ ಬೀದಿಯಲ್ಲಿದ್ದ ಬಸವರಾಜರಿಗೂ ವಹಿಸುತ್ತಾ ಹೇಳಿದ್ದೆಂದರೆ, 'ಈ ಕಟ್ಟಡದಲ್ಲಿ ಯಾರು ಯಾವುದೇ ಶುಭ ಕಾರ್ಯ, ಇನ್ನಿತರ ರೈತ ಸಂಬಂಧಿ ಮಾತುಕತೆ, ಮತ್ಯಾವುದೇ ಸಭೆ ಸಮಾರಂಭ ಮಾಡಿಕೊಳ್ಳಬಹುದು. ಇದು ಊರವರಿಗೇ ಸೇರಿದ ಕಟ್ಟಡ, ಇಲ್ಲಿ ನನ್ನ ತಾಯಿ ಗೌರಮ್ಮನ ಹೆಸರು ಮಾತ್ರ ಇರುತ್ತದೆ' ಎಂದರು. ಕಾರ್ಯಕ್ರಮಕ್ಕೆ ಅವರ ಸಹೋದರಿಯೂ ಬಂದಿದ್ದರು. ಊರು ಬಿಟ್ಟು ಹೊರಡುವಲ್ಲಿ ಜಗಲಿಯ ಮೇಲೆ ತಂಗಿ ಲಲಿತಮ್ಮ ನಿಂತಿದ್ದರೆ, ಕೆಳಗಿದ್ದ ಭೈರಪ್ಪನವರು ಸಹೋದರಿಯ ಪಾದಗಳಿಗೆ ನಮಸ್ಕರಿಸಿದರು. ಇದಕ್ಕಿಂತಲೂ ಸಂತೇಶಿವರ ಪ್ರಯಾಣ ಸಂದರ್ಭದ ಮತ್ತೊಂದು ಘಟನೆ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದೆ.

ಸಂತೆಶಿವರ ಬಿಟ್ಟು ನುಗ್ಗೇಹಳ್ಳಿಯ ಕಡೆಗೆ ಬರುವಲ್ಲಿ ದೂರದ ಒಂದು ಸಣ್ಣ ಗುಡ್ಡವನ್ನು ಭೈರಪ್ಪನವರು ತೋರಿಸುತ್ತಾ, ಆ ಗುಡ್ಡದ ತುದಿಯ ಅಂಗಳವೂ ನನ್ನ ಆಟದ ಮೈದಾನವಾಗಿತ್ತೆಂದರು. ವಾಹನ ನಡೆಸುತ್ತಾ ಇನ್ನೇನು ನುಗ್ಗೇಹಳ್ಳಿ ಮುಟ್ಟಬೇಕು ಎನ್ನುವಲ್ಲಿ ಧಡಕ್ಕನೆ ಕಾರು ನಿಲ್ಲಿಸಿದರು. 'ತಾಳಿ ಇಲ್ಲೇ ಹೋಗಿ ಬರುತ್ತೇನೆ' ಎನ್ನುತ್ತಾ ರಸ್ತೆ ಬದಿಯ ಬೇಲಿ ದಾಟಿ ಹೊಲಮಾಳದತ್ತ ನಡೆದರು. ಜನ ಸಂಚಾರವಿಲ್ಲದ ರಸ್ತೆ ಬದಿ ನಿಲ್ಲಿಸಿದ್ದು ಮೂತ್ರ ಬಾಧೆಗಿರಬಹುದೆಂದು ಕಾರಿನೊಳಗೆ ಸುಮ್ಮನೆ ಕುಳಿತಿದ್ದ ನನಗೆ, ಅವರ ನಡಿಗೆ ಹಾಗೇನೂ ಕಾಣದಂತಾಗಿ ಅಲ್ಲೇ ದೂರವಾದರು. ಹುಲ್ಲುಗರಿಕೆಯ ಮಾಳದತ್ತ ಭೈರಪ್ಪನವರು ದಿಕ್ಕು ತಪ್ಪಿ ನಡೆಯುವಲ್ಲಿ, ನಾನು ಕಾರಿನಲ್ಲೇ



ವಿರಾಜಮಾನನಾಗಿರುವುದು ಸೂಕ್ತವಲ್ಲವೆಂದು ತಿಳಿದು ಅವರ ಹಿಂದೆ ಓಡಿಹೋಗಿ ಸೇರಿಕೊಂಡೆ. ಬೆಳೆ ಕೊಯ್ದು ದಸಿ ಬಿಟ್ಟುಕೊಂಡು ಹುಲ್ಲು ಕಳೆಯ ಹೊಲಮಾಳದಲ್ಲಿ ಉದ್ದದ ದೊಣ್ಣೆ ಹಿಡಿದು ಕೂತಿದ್ದವರೊಬ್ಬರನ್ನು ಸಮೀಪಿಸಿದ ಭೈರಪ್ಪನವರು 'ಏನ್ ನರಸಣ್ಣ, ಹೆಂಗಿದ್ದೀಯೆ?' ಎಂದರು. ಭೈರಪ್ಪನವರು ಪ್ಯಾಂಟು ಕೋಟಿನಲ್ಲಿದ್ದರೆ, ನರಸಣ್ಣನವರು ಚಡ್ಡಿ- ಬನೀನಿನಲ್ಲಿ ಹಸು ಎಮ್ಮೆ ಆಡು ಕಾಯುತ್ತಿದ್ದರು. ಅದಾಗ ನರಸಣ್ಣ ಕೂತಲ್ಲಿಂದಲೇ 'ಭೈರಣ್ಣಾ ನೀನು, ಇಲ್ಲಿ...' ಎಂದು ಆನಂದತುಂದಿಲರಾಗಿ, ಆ ಮುಂದೆ ಪರಸ್ಪರ ಉಭಯಕುಶಲೋಪರಿ, ಮನೆಮಾತಿನ ಸಂಭಾಷಣೆಯಲ್ಲಿ ನನ್ನನ್ನು ಮರೆತಂತಾದರು.

ಭೈರಪ್ಪನವರು ನರಸಣ್ಣನವರೊಡನೆ ಮಾತುಕತೆ ಮುಗಿಸಿ 'ನಾನಿನ್ನು ಬರಲೇ' ಅಂದರು. ನರಸಣ್ಣ ಹುಸಿ ಸಿಟ್ಟಿನಲ್ಲಿ 'ಎಲ್ಲಿಗಪ್ಪ ಓದಿಯೇ? ಇಂಗ್ಬಂದು ಅಂಗೇ ಓಗಕ್ಕಂತ್ಲೇ ಬಂದ್ಯ, ನಡಿ ನಡಿ ಮನೆಗೆ' ಎಂದರು. ಭೈರಪ್ಪನವರು, 'ರಸ್ತೆಯಲ್ಲಿ ಕಾರು ನಿಲ್ಲಿಸಿದ್ದೇನೆ, ಇಲ್ಲಿ ನಿನ್ನ ಎತ್ತು ಎಮ್ಮೆ ಮೇಯ್ತಾವೆ, ಇದನ್ನೆಲ್ಲ ಬಿಟ್ಟು ನೀನು ಎಲ್ಲಿ ಬಂದೀಯೇ ಬಿಡು' ಎಂದರು. ನರಸಣ್ಣ 'ಎಲಾ, ನೀನಿಲ್ದೆ ನಿನ್ನ ಕಾರು ಎಲ್ಲಿಗಪ್ಪ ಹೋದದು, ನನ್ನ ಎತ್ತು